ಲೇಖನ 05

# ಶಾಲೆಗೆ ಬಂದ ಬೂದು ಸಿಪಿಲೆ

ಅದೊಂದು ಶನಿವಾರ. ಶಾಲೆಗೆ ರಜೆಯ ದಿವಸ. ಆದರೆ, ನಮ್ಮ ಶಾಲೆಯ ಪುಟಾಣಿ ಪಕ್ಷಿ ಪ್ರೇಮಿ ತಂಡಕ್ಕೆ ಅದು ಸುದಿನ. ಹೌದು, ಬೆಳಗ್ಗಿನ ಒಂಭತ್ತರ ವೇಳೆಗೆ ನಾಲ್ಕಾರು ಮಕ್ಕಳು ತಲುಪಿದ್ದ ಸಮಯ. ದಿವ್ಯ ಓಡುತ್ತಾ ಬಂದು, "ನೋಡಿ ಸರ್, ಅಲ್ಲೊಂದು ಬಾಲ ಅಲ್ಲಾಡಿಸುತ್ತಿರುವ ಹೊಸ ಪಕ್ಷಿ. ನಾವು ಇದುವರೆಗೂ ಕಾಣದ ಹಕ್ಕಿ. ಬೇಗ ಬನ್ನಿ ಸರ್, ಕ್ಯಾಮರಾ ತನ್ನಿ ಸರ್.." ಎಂದು ಕಿರು ಏರು ಧ್ವನಿಯಲ್ಲಿ ಹೇಳಿದ್ದೇ ತಡ ಕ್ಯಾಮರಾ ಕಣ್ಣುಗಳು ಓಪನ್ ಆದವು.

ಉದ್ದ ಬಾಲದ ಸಣ್ಣ ಶರೀರದ ಪಕ್ಷಿಯೊಂದು ಇಂಟರ್ ಲಾಕ್ ಹಾಕಿದ ಅಸೆಂಬ್ಲಿ ಗ್ರೌಂಡಲ್ಲಿ ಬೆಳೆದಿದ್ದ ಹುಲ್ಲುಗಳೆಡೆಯಲ್ಲಿ ನಿಂತು ಕೊಂಡಿತ್ತು. ನಿಂತಲ್ಲೇ ನಿಂತುಕೊಂಡು ಬಾಲವನ್ನು ಸರಾಗವಾಗಿ ಅಲ್ಲಾಡಿಸುತ್ತಿತ್ತು. ಮೊದಲ ನೋಟಕ್ಕೆ ಯಾವ ಹಕ್ಕಿ ಎಂದು ನಿಖರವಾಗಿ ಹೇಳಲು ನನಗೂ ಸಾಧ್ಯವಾಗಲಿಲ್ಲ.ಯಾಕೆಂದರೆ ನಮ್ಮೂರಿಗೆ ಅದು ಅಷ್ಟೊಂದು ಸಾಮಾನ್ಯ ಪಕ್ಷಿಯಾಗಿರಲಿಲ್ಲ.!



ಚಿತ್ರ ಕೃಪೆ: ರಾಜು ಕಿದೂರು

ಬೂದು ಸಿಪಿಲೆ (Grey wagtail) ಒಂದು ವಲಸೆ ಹಕ್ಕಿ. ತೇವ ಭೂಮಿಯನ್ನು ಇಷ್ಟ ಪಡುತ್ತದೆ. ದೇಹದ ಕೆಳಭಾಗದಲ್ಲಿ ಅಲ್ಲಲ್ಲಿ ಹಳದಿ ಬಣ್ಣ ಹರಡಿಕೊಂಡಿದೆ. ತಲೆಯು ಬೂದು ಬಣ್ಣದಲ್ಲಿರುವುದರಿಂದಲೇ ಈ ಹಕ್ಕಿಯು ಬೂದು ಸಿಪಿಲೆ ಎಂಬ ಹೆಸರು ಪಡೆದಿದೆ. ಇವುಗಳು ಹರಿಯುವ ನೀರಿನ ಬದಿಗಳಲ್ಲಿ ಕಾಣಸಿಕ್ಕುವುದು ಬಹಳ ಹೆಚ್ಚು. ಆದರೆ, ಕೆಲವೊಮ್ಮೆ ಕಲ್ಲು ಬಂಡೆಗಳೆಡೆಯಲ್ಲೂ ತನ್ನ ಇರುವಿಕೆಯನ್ನು ಖಚಿತಪಡಿಸುವುದಿದೆ.

ತಮ್ಮ ಉದ್ದವಾದ ಬಾಲವನ್ನು ಮೇಲಕ್ಕೆ, ಕೆಳಕ್ಕೆ ಮಾಡುವ ವರ್ಗದ ಪಕ್ಷಿಗಳನ್ನು ವ್ಯಾಗ್ ಟೈಲ್ ಎಂದು ಕರೆಯಲಾಗುತ್ತದೆ. ಮೊಟಸಿಲ್ಲಾ ಸಿನೆರಿಯ (Motacilla cinerea) ಎಂಬ ವೈಜ್ಞಾನಿಕ ಹೆಸರಿನಿಂದ ಕರೆಯಲ್ಪಡುವ ಬೂದು ಸಿಪಿಲೆಯಂತೆ ಹಳದಿ ಸಿಪಿಲೆ (Motacilla flava), ಬಿಳಿ ಸಿಪಿಲೆ (Motacilla alba), ಸಿಟ್ರಿನ್ ಸಿಪಿಲೆ (Motacilla citreala) ಹಾಗೂ ಅಡವಿ ಸಿಪಿಲೆ (Dendronanthus indica) ಗಳೂ ನಮ್ಮೂರಿಗೆ ವಲಸೆಯಾಗಿ ಬಂದು ತಲಪುತ್ತವೆ ಎಂಬುವುದು ಮತ್ತೊಂದು ಖುಷಿಯ ವಿಚಾರವಾಗಿದೆ. ಆದರೆ, ವೈಟ್ ಬ್ರೌಡ್ ವ್ಯಾಗ್ ಟೈಲ್ (Motacilla maderaspatensis) ನಮ್ಮೂರಿನಲ್ಲಿ ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲೂ ಕಂಡು ಬರುವ ಸಾಮಾನ್ಯ ಹಕ್ಕಿಯಾಗಿದೆ.

ಸರೋವರಗಳು, ನದಿಗಳು, ತೋಡು ಮುಂತಾದ ನೀರೊರತೆಯ ತೀರಗಳಲ್ಲಿ ಇವುಗಳು ಹೆಚ್ಚಾಗಿ ಕಂಡು ಬರುತ್ತವೆ. ಯುರೋಪ್ ಮತ್ತು ಮಧ್ಯ ಏಷ್ಯಾದ ಪರ್ವತ ಪ್ರದೇಶಗಳು ಇವುಗಳ ಸಂತಾನೋತ್ಪತ್ತಿಗೆ ಪೂರಕ ವಾತಾವರಣವನ್ನು ಒದಗಿಸುತ್ತವೆ. ಕಲ್ಲುಗಳನ್ನು ಹಾಗೂ ಬೇರುಗಳನ್ನು ಬಳಸಿಕೊಂಡು ಬಹಳ ವಿಶೇಷವಾಗಿ ಗೂಡಕಟ್ಟುತ್ತವೆ. ಎಪ್ರಿಲಿನಿಂದ ಜುಲಾಯ್ ವರೆಗಿನ ಕಾಲಾವಧಿಯಲ್ಲಿ ಮೂರರಿಂದ ಆರು ಮೊಟ್ಟೆಗಳನ್ನು ಇಡುತ್ತವೆ. ಹೀಗೆ ಬಹಳ ಕುತೂಹಲಕಾರಿ ಮಾಹಿತಿಗಳು ಬೂದು ಸಿಪಿಲೆಗಳಿಗಿವೆ ಎಂಬುವುದನ್ನು ಮಕ್ಕಳಿಗೆ ತಿಳಿಸಿದ್ದೇ ತಡ ನಮ್ಮನ್ನು ನೋಡಲು ಬಂದ ಬೂದು ಸಿಪಿಲೆ ಅಲ್ಲಿಂದ ಮಾಯವಾಗಿತ್ತು.

ಆಹಾರವನ್ನು ಹುಡುಕುತ್ತಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತೆರಳುವವುಗಳೇ ವಲಸೆ ಹಕ್ಕಿಗಳು. ವಾತಾವರಣದಲ್ಲಿನ ಏರಿಳಿತ ಮಾತ್ರವಲ್ಲದೆ ಆಹಾರ ಸಿಗುವಲ್ಲಿ ಉಂಟಾಗುವ ವ್ಯತ್ಯಯಗಳೇ ವಲಸೆಗೆ ಮೂಲ ಕಾರಣಗಳು. ಭಾರತಕ್ಕೆ ಬರುವ ವಲಸೆ ಹಕ್ಕಿಗಳು ಕಡಿಮೆ ಏನಲ್ಲ. ಸಾಮಾನ್ಯವಾಗಿ ಸೆಪ್ಟೆಂಬರ್ ಕೊನೆಯವಾರದಲ್ಲಿ ಭಾರತಕ್ಕೆ ವಲಸೆ ಹಕ್ಕಿಗಳು ಬರಲಾರಂಬಿಸುತ್ತವೆ.



ಚಿತ್ರ ಕೃಪೆ: ರಾಜು ಕಿದೂರು

ಇದು ವಲಸೆ ಹಕ್ಕಿಗಳನ್ನು ಕಣ್ತುಂಬ ಆಸ್ವಾದಿಸಲು ಸಕಾಲ. ನಾವಿರುವ ಮನೆ ಅಕ್ಕಪಕ್ಕಕ್ಕೂ ಹಲವು ವಲಸೆ ಹಕ್ಕಿಗಳು ಬರುತ್ತವೆ. ನಾವು ಕಣ್ತುಂಬಿಸಿಕೊಳ್ಳುವುದಿಲ್ಲ ಎಂದೇ ಹೇಳಬೇಕಷ್ಟೇ.

ಅಂದಹಾಗೆ ಬೂದು ಸಿಪಿಲೆ ನಿಮ್ಮಲ್ಲಿಗೂ ಬರಬಹುದು. ನಿರೀಕ್ಷಣೆ ಎಂಬ ಸಮಾಧಾನದ ಚಟುವಟಿಕೆಗೆ ಸಮಯ ಕಂಡುಕೊಳ್ಳಲು ಕಲಿಯಬೇಕಷ್ಟೇ.

::::::::::::::::::::::::::::::::::::::::::::

**ರಾಜು ಕಿದೂರು**

**ಅಧ್ಯಾಪಕರು**

**ಹೋಲಿ ಫ್ಯಾಮಿಲಿ ಅನುದಾನಿತ ಶಾಲೆ,**

**ಕುಂಬಳೆ, ಕೇರಳ**

**ಇಮೇಲ್: rajukidoor@gmail.com**